ವರ್ಣವ್ಯವಸ್ಥೆಯ ಸಂಕೇತವೂ ಆಗಿದೆ. ಕಾಲಿನಿಂದ ಕಟ್ಟಿಕೊಂಡ ನವಿಲರೂಪವೂ ಆಗಿದೆ.

ಒಳಗಿನ ಉರಿ ಸಾಮಾನ್ಯವಾದುದಲ್ಲ. 'ಒಡಲ ಬೆಂಕಿಲಿ ಹೆಣಬೆಂದೋ' ಎನ್ನುವಂತೆ ಒಂದು ಪಾದವಿಟ್ಟರೂ ಬೂದಿಯಾಗುವ ಈ ಉರಿಯ ತಾಪಕ್ಕೆ ಆಲಿಕಲ್ಲು ಕೂಡ ಬಿದ್ದ ತಕ್ಷಣವೇ ಇದ್ದಿಲಾಗುತ್ತಿದೆ. ಪುಟ್ಟಪಕ್ಷಿಯ ಒಡಲುರಿಯ ಬಡಬಾಗ್ನಿಯಲ್ಲಿ ಕೂತವರು ನಿಂತವರು ಚಿತೆಯಾಗುತ್ತಿದ್ದಾರೆ. ಈ ಕೂತವರು ನಿಂತವರು ಯಾರು ಎಂದು ಬಿಡಿಸಿ ಹೇಳಬೇಕಾಗಿಲ್ಲ. ಯಾರು ಅಸಮಾನತೆಯನ್ನು ಬಿತ್ತಿ ಬೆಳೆಯುತ್ತಿದ್ದಾರೋ ಅವರು. ಅಸಮಾನತೆಯನ್ನು ಸರಿಸಮಾನವಾಗಿಸಲು ಒಂದು ಪುಟ್ಟ ಪಕ್ಷಿಯೇ ಬರಬೇಕಾಗಿದೆ. ಅದರಲ್ಲೂ ಕೊನೆಯವರೇ ಆಗಿರ ಬೇಕು. ಅಂತ್ಯಜರು, ಅಸ್ಪೃಶ್ಯರೇ ಈ ಲೋಕವನ್ನು ಸಮಾನವಾಗಿಸಲು ಸಾಧ್ಯ.

ಈ ಮೂರನೇ ಚರಣಕ್ಕೆ ಇನ್ನೊಂದು ಆಯಾಮವೂ ಇದೆ. ಇಲ್ಲಿ ಪಕ್ಷಿ ಪಾದವನ್ನಿಟ್ಟರೂ ಬೂದಿಯಾಗುವುದು, ಬಿದ್ದ ಆಲಿಯ ಕಲ್ಲು ಇದ್ದಿಲಾ ಗುವುದು ಎನ್ನುವುದು. ಬೂದಿಯಾಗಿಸುವ ಮತ್ತು ಇದ್ದಿಲಾಗಿಸುವ ಶಕ್ತಿ ಯಾವುದಕ್ಕೆ ಇದೆ ಎಂದರೆ ಹೊಟ್ಟೆಯೊಳಗಿನ ಉರಿಗೆ. ಆ ಉರಿ ನಂದಿಸಲಾರದ ಕಿಚ್ಚು. ಆರದ ಉರಿ. ಹಸಿವು, ಅವಮಾನದ ಉರಿ. ಎಲ್ಲರನ್ನು ನುಂಗುವಂತಹದ್ದು. (ಹೊಟ್ಟೆಯೊಳಗಿನ ಉರಿಯನ್ನು ಸರಳಾರ್ಥದಲ್ಲಿ ಅಸೂಯೆ ಎನ್ನುವಂತೆ ಗ್ರಹಿಸುವಂತಹದ್ದಲ್ಲ.) 'ಪಕ್ಷಿಯಪಾದ'ವೆಂಬ ಮೃದು ರೂಪವೂ, ಶೈತ್ಯವನ್ನು ಒಳಗಿಟ್ಟುಕೊಂಡಿರುವ 'ಬೀಳುವ ಆಲಿಕಲ್ಲು'ಗಳೇ ಈ ಉರಿಯಲ್ಲಿ ಬೂದಿಯಾಗುತ್ತವೆ; ಇದ್ದಿಲಾಗುತ್ತವೆ. ಕುಂತವರೂ, ನಿಂತವರೂ ಚಿತೆಯಾಗುತ್ತಾರೆ. ಉಳಿದವುಗಳು ಇನ್ನೂ ಏನೇನು ಆಗಬಹುದು? ಎಂಬುದನ್ನು ಓದುಗರ ಊಹೆಗೆ ಬಿಡುತ್ತಾರೆ.

ಆ ಉರಿ ದಾಳಿಯನ್ನು ಶುರುಮಾಡಿದರೆ ಏನೆಲ್ಲ ಸಂಭವಿಸಬಹುದು? ಅದರ ಮುಂದೆ ಎಲ್ಲವೂ ಭಸ್ಮವೇ. ಅಂದರೆ, ಮೂಲಗುಣವನ್ನೇ ಕಳೆಯುವ ಶಕ್ತಿ ಈ ಉರಿಗಿದೆ. ಈ ಕವಿತೆ ಎಲ್ಲಿಗೆ 'ಫ್ರಾಗ್‌ಜಂಪ್' ಮಾಡುತ್ತದೆಯೆಂದರೆ, 'ಎಲ್ಲವನ್ನು ನುಂಗುವ, ರತಮವನ್ನು ಆಪೋಶನ ಮಾಡಿ 'ಸಾಮಾಜಿಕ ನ್ಯಾಯ'ವನ್ನು ಧ್ಯಾನಿಸುವ ಕಡೆಗೆ. ಇಲ್ಲಿ ಕವಿತೆ ಇನ್ನಷ್ಟು ವೇಗವರ್ಧಕವನ್ನು ಪಡೆಯುತ್ತದೆ. ಮುಖ್ಯವಾಗಿ ತಾನು ಏನನ್ನು ಹೇಳಬೇಕಾಗಿದೆ ಎಂಬ ಖಚಿತ ದಾರಿಗೆ ತಿರುಗುತ್ತದೆ.

**ಮಳೆಯೇ ಹೆರಲಾರೆಯಾ**
**ನನ್ನೊಡಲ ಮೇಲೊಂದು**
**ಇದ್ದಿಲಾಗದ ಹಿಮಾಲಯವ**
**ಅದರಡಿ ತಣ್ಣಗೆ ಕಣ್ಮುಚ್ಚಬೇಕು**
**ಮತ್ತೆ ಎಚ್ಚೆತ್ತು**
**ನೀರಾಗಿ ಹರಿಯಬೇಕು**

ಮುಂದಿನ ಸಾಲುಗಳು ಆ ಉರಿಯು ಏನನ್ನು ಅಂತರ್ಯದಲ್ಲಿ ಧರಿಸಿದೆ ಎಂಬುದನ್ನು ವಿವರಿಸಿ ಕೊಳ್ಳುತ್ತದೆ. ಮಳೆ ನನ್ನೊಡಲ ಮೇಲೆ ಹನಿಯುತ್ತಿಲ್ಲ ಎಂದು ಹೇಳಿದ ಕವಿತೆಯ ಆರಂಭ, ಹೊಟ್ಟೆಯೊಳಗಿನ ಅದರಲ್ಲೂ ಪುಟ್ಟ ಹೊಟ್ಟೆಯೊಳಗಿನ ಉರಿಯನ್ನು ಆರಿಸಲಾಗದ ಮಳೆಯಾಗಿ ಬೆಳೆಯುತ್ತದೆ. ಕೊನೆಯಲ್ಲಿ ಕೇಳುತ್ತಿರುವುದು ಮತ್ತು ಹೇಳುತ್ತಿರುವುದು ಇದ್ದಿಲಾಗದ ಹಿಮಾಲಯವ ಹೆರು ಅಂತ. 'ಆಲಿ'ಯೇ ಬಡವರ ಉರಿಗೆ ಇದ್ದಿಲಾಗುತ್ತದೆ. ಇನ್ನು ಇದ್ದಿಲಾಗದ ಹಿಮಾಲಯವ ಹೆರುವ ಸವಾಲನ್ನು ಕವಿ ಮಳೆಗೆ ಹಾಕುತ್ತಾನೆ. ಆಕಸ್ಮಾತ್ ಅಂತಹ ಹಿಮಾಲಯವನ್ನೇ ಹೆತ್ತಿದ್ದೇ ಆದರೆ ಅದರಡಿ ತಣ್ಣಗೆ ಕಣ್ಮುಚ್ಚಬೇಕು. ಆದರೆ ಅಲ್ಲಿಗೆ ಅದು ಕೊನೆಯಾಗುವುದಿಲ್ಲ. ಮತ್ತೆ ಎಚ್ಚತ್ತ ಪ್ರಜ್ಞೆಯಾಗಿ ಆಲಿಯಾಗದೆ ನೀರಾಗಬೇಕು. ಘನಗೊಳ್ಳದೆ ಚಲನರೂಪಿಯಾಗಬೇಕು ಎಂಬ ಆಶಯ ಮೊದಲಿನ ಆಕ್ರೋಶಕ್ಕೆ ತಾತ್ವೀಕರಿಸಿದ ಮಾನವೀಯಲೋಕವನ್ನು ಲಗತ್ತಿಸುತ್ತದೆ. ನನ್ನ ಎಚ್ಚರವೂ ಎಲ್ಲೆಡೆ ಹರಿವ ಗುಣವೂ ಸೇರಿಕೊಂಡು 'ಅಸಮಾನ ಸಮಾಜ'ವನ್ನು ಹೊಡೆದುರುಳಿಸುತ್ತದೆ. ಕೇಡಿಲ್ಲದ, ಕೆಂಡವಾಗದ, ಸಿಟ್ಟು ನೀರಾಗುವ ಗುಣವನ್ನು ಪಡೆಯುತ್ತದೆ.

'ಅಸ್ಪೃಶ್ಯರ ಒಡಲ ಸಂಕಟದ ತೀವ್ರತೆ' ಯಾವ ಸ್ವರೂಪದ್ದು ಎನ್ನುವುದನ್ನು ಇಲ್ಲಿ ಕಲ್ಪಿಸಿ ಕೊಳ್ಳಬಹುದು. ಆದರೆ ಅದು ಸಾಧ್ಯವಾಗದಿದ್ದಕ್ಕೆ ಮಳೆಯನ್ನು ಇನ್ನೊಂದು ಬಗೆಯಲ್ಲಿ ಕವಿ ತನ್ನ ಬದುಕಿನ ಕಷ್ಟಗಳನ್ನು ನಿವಾರಿಸುವ ರೂಪವಾಗಿ ಬಾ ಎಂದು ಆಹ್ವಾನಿಸುತ್ತಾನೆ. ಮಳೆಗಿಂತಲೂ